# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಸಕಲೇಶಪುರ

## C .C.No. 1250/2021

| | | |
|---|---|---|
| ಹೆಸರುಃ | ಭಾರತಿ | |
| ತಂದೆ/ಗಂಡ ಹೆಸರುಃ | ದಿನೇಶ್ | DW-1 |
| ವಯಸ್ಸು | 46 ವರ್ಷ | |
| ವೃತ್ತಿ | ಕೂಲಿ | |
| ವಿಳಾಸಃ | ಬಣಾಲೂ | **ದಿನಾಂಕಃ16-02-2024** |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಟಿ ಎಂ ಎ ವಕೀಲರಿಂದ**

ನನಗೆ 6-7 ವರ್ಷಗಳಿಂದ ಪಿರ್ಯಾದಿ ಪರಿಚಯ ಇದೆ. 2018 ರಲ್ಲಿ ನಾನು ಪಿರ್ಯಾದಿಯಿಂದ 1,10,000/- ರೂ ಕೈ ಸಾಲ ಪಡೆದಿದ್ದೇನೆ. ನಾನು ಸಾಲ ಪಡೆಯುವ ಕಾಲಕ್ಕೆ ಭದ್ರತೆಗಾಗಿ ಒಂದು ಖಾಲಿ ಚೆಕ್ಕನ್ನು ಕೊಟ್ಟಿದ್ದೆನು. ನಾನು ಖಾಲಿ ಚೆಕ್ ಕೊಡುವಾಗ ಯಾವುದೇ ಬರವಣಿಗೆ ಮಾಡಿರುವುದಿಲ್ಲ, ಯಾವುದೇ ಸಹಿ ಮಾಡಿರುವುದಿಲ್ಲ. ನಾನು 1 ಲಕ್ಷ ಹಣವನ್ನು ನನ್ನ ಗಂಡನ ಖಾತೆ ವಿಜಯಾ ಬ್ಯಾಂಕ್ , ದೇವಲಕೆರೆ ಶಾಖೆಯ (ಈಗ ಬ್ಯಾಂಕ್ ಆಫ್ ಬರೋಡಾ) ಮುಖಾಂತರ ಅರ್ . ಟಿ. ಜಿ. ಎಸ್ ಮುಖಾಂತರ ಪಿರ್ಯಾದಿ ಖಾತೆಗೆ ಹಣವನ್ನು ಜಮಾ ಮಾಡಿರುತ್ತೇನೆ. ಉಳಿದ 10 ಸಾವಿರ ಹಣವನ್ನು ನನ್ನ ಖಾತೆ ಇರುವ ವಿಜಯಾ ಬ್ಯಾಂಕ್ , ದೇವಲಕೆರೆ ಶಾಖೆಯ (ಈಗ ಬ್ಯಾಂಕ್ ಆಫ್ ಬರೋಡಾ) ಚೆಕ್ಕನ್ನು ಕೊಟ್ಟು ಪಿರ್ಯಾದಿ ಖಾತೆಗೆ ಹಣವನ್ನು ಜಮಾ ಮಾಡಿರುತ್ತೇನೆ. ನಾನು 1,10,000/- ಮರುಪಾವತಿ ಮಾಡಿದ ನಂತರ ಪಿರ್ಯಾದಿಗೆ ಕೊಟ್ಟ ಖಾಲಿ ಚೆಕ್ಕನ್ನು ಹಿಂದಕ್ಕೆ ಕೊಡಲು ಕೇಳಿದಾಗ ಆತನು ಬಡ್ಡಿ ಕೊಟ್ಟಲ್ಲಿ ಚೆಕ್ಕನ್ನು ವಾಪಸ್ಸು ಕೊಡುವುದಾಗಿ ಹೇಳಿ ಪದೇ ಪದೇ ತೊಂದರೆ ಕೊಡುತ್ತಿದ್ದನು. ನಂತರ ನಾನು ನನ್ನ ವಕೀಲರ ಮುಖಾಂತರ ಪಿರ್ಯಾದಿಗೆ ಚೆಕ್ಕನ್ನು ವಾಪಸ್ಸು ಕೊಡುವಂತೆ ಕೇಳಿ ನೋಟೀಸ್ ಕೊಟ್ಟಿರುತ್ತೇನೆ. ನೋಟೀಸ್ ಪಿರ್ಯಾದಿಗೆ ಜಾರಿಯಾಗಿರುತ್ತದೆ. ಪಿರ್ಯಾದಿಯು ನಾನು ನೀಡಿದ ನೋಟೀಸ್ ಗೆ ಮರು ಉತ್ತರ ನೀಡಿರುವುದಿಲ್ಲ. ನಾನು ಪಿರ್ಯಾದಿಯಿಂದ 4,50,000/- ಹಣವನ್ನು ಪಡೆದಿರುವುದಿಲ್ಲ. ನಾನು 4,50,000/- ರೂ

ಹಣಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ಚೆಕ್ಕನ್ನು ಕೊಟ್ಟಿರುವುದಿಲ್ಲ. ನಿಪಿ-1 ರ ಮೇಲೆ ಇರುವ ಸಹಿ ನನ್ನದಲ್ಲ. ನಾನು ಕನ್ನಡದಲ್ಲಿ ಸಹಿ ಮಾಡುತ್ತೇನೆ. ಇಂಗ್ಲೀಷ್ ನಲ್ಲಿ ಸಹಿ ಮಾಡುವುದಿಲ್ಲ. ನಾನು ಪಿರ್ಯಾದಿಯಿಂದ 1,10,000/- ರೂ ಹಣವನ್ನು ಕೈ ಸಾಲ ಪಡೆದಿರುತ್ತೇನೆ. ಅದನ್ನು ಮರುಪಾವತಿ ಮಾಡಿರುತ್ತೇನೆ. ನಾನು ಪಿರ್ಯಾದಿಯಲ್ಲಿ ಹೇಳಿರುವಂತೆ 4,50,000/- ರೂ ಹಣ ಪಡೆದಿರುವುದಿಲ್ಲ. ನನಗೆ ಪಿರ್ಯಾದಿ ಕಡೆಯಿಂದ ನಿಪಿ-3 ರಂತೆ ಯಾವುದೇ ನೋಟೀಸ್ ಬಂದಿರುವುದಿಲ್ಲ. ನಿಪಿ-5 ಅಂಚೆ ಸ್ವೀಕೃತಿ ರಸೀದಿಯಲ್ಲಿರುವ ಸಹಿ ನನ್ನದಲ್ಲ. ನಾನು ಈ ನ್ಯಾಯಾಲಯದಲ್ಲಿ ಪಿರ್ಯಾದಿ ಸಲ್ಲಿಸಿದ ಪಿರ್ಯಾದಿಯನ್ನು ವಜಾ ಮಾಡಿ ನನ್ನನ್ನು ಬಿಡುಗಡೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಸಾಕ್ಷಿದಾರರು ಹಾಜರುಪಡಿಸಿದ ದಿಃ 08-07-2021 ರಂದು ಪಿರ್ಯಾದಿ ಗೆ ನೀಡಿದ ನೋಟೀಸ್ ಪ್ರತಿಯನ್ನು ನಿಡಿ-1, ಸ್ವೀಕೃತಿ ರಸೀದಿ ನಿಡಿ-2 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು)

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಜೆ ಎಂ ಎಫ್ ಸಿ, ಸಕಲೇಶಪುರ**